ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯಿಂದ ತೆಗೆದುಕೊಂಡಿರುವ ರಸ್ತೆ ಕಾಮಗಾರಿಗಳು.

210(2413)

ಶ್ರೀ ಕೃಷ್ಣಪ್ಪ ಪಿ(ದೊಡ್ಡಬಳ್ಳಾಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

1. . ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ವಿವಿಧ ಯೋಜನೆಗಳ ರಸ್ತೆ ಕಾಮಗಾರಿಗಳು ಯಾವುವು?

2. ಈ ಕಾಮಗಾರಿಗಳಿಗೆ ಎಷ್ಟು ಹಣ ಖರ್ಚಾಗಿದೆ?

3. ಈ ಕಾಮಗಾರಿಗಳಿಗೆ ಪೂರ್ಣಗೊಂಡಿರುವ ಕೆಲಸಗಳು ಯಾವುವು? ಪೂರ್ಣಗೊಳ್ಳದೇ ಇರುವ ಕೆಲಸಗಳು ಯಾವುವು?

4. ಈ ರಸ್ತೆಗಳ ಕಾಮಗಾರಿಗಳಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

1. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿಯಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿಗೆ ಸಂಬಂಧಿಸಿದಂತೆ ಕಳೆದ 3 ವರ್ಷಗಳಲ್ಲಿ ವಿವಿಧ ಯೋಜನೆಗಳಡಿ ತೆಗೆದುಕೊಂಡ ರಸ್ತೆ ಕಾಮಗಾರಿಗಳ ವಿವರ ಈ ಕೆಳಕಂಡಂತಿವೆ. ಕಾಮಗಾರಿ ವಿವರ ಅನುಬಂಧದಲ್ಲಿ ನೀಡಿದೆ.

ಕ್ರ. ಸಂ.	ವರ್ಷ	ಯೋಜನೆ	ಯೋಜನೇತರ	ಉ.ಭ. ಯೋ.	ಬಯಲು ಸೀಮೆ	ಒಟ್ಟು
1	1998-99	25	-	9	1	35
2	99-2000	15	-	4	3	22
3	2000-2001	18	47	13	8	86

2. ಈ ಕಾಮಗಾರಿಗಳಿಗೆ 1998-99ನೇ ಸಾಲಿನಲ್ಲಿ ರೂ.48.08 ಲಕ್ಷಗಳು, 1999-2000ನೇ ಸಾಲಿನಲ್ಲಿ ರೂ.66.16 ಲಕ್ಷಗಳು, 2000-01ನೇ ಸಾಲಿನಲ್ಲಿ ರೂ.80.84 ಲಕ್ಷಗಳು ವೆಚ್ಚವಾಗಿರುತ್ತದೆ.

3. 1998-99ನೇ ಸಾಲಿನಲ್ಲಿ ಎಲ್ಲಾ 35 ಕಾಮಗಾರಿಗಳು ಪೂರ್ಣಗೊಂಡಿವೆ. 1999-2000 ಸಾಲಿನಲ್ಲಿ 17 ಕಾಮಗಾರಿಗಳು ಪೂರ್ಣಗೊಂಡಿದ್ದು, 5 ಕಾಮಗಾರಿಗಳು ಪ್ರಗತಿಯಲ್ಲಿವೆ. 2000-01ನೇ ಸಾಲಿನಲ್ಲಿ 48 ಕಾಮಗಾರಿಗಳು ಪೂರ್ಣಗೊಂಡಿದ್ದು, 38 ಕಾಮಗಾರಿಗಳು ಪ್ರಗತಿಯಲ್ಲಿವೆ.

4. ಅಂತಹ ಪ್ರಕರಣಗಳು ಸರಕಾರದ ಗಮನಕ್ಕೆ ಬಂದಿರುವುದಿಲ್ಲ.

ದೊಡ್ಡಬಳ್ಳಾಪುರ ತಾಲ್ಲೂಕು 1998-99ರಿಂದ 2000-2001ರ ಸಾಲುಗಳ ರಸ್ತೆ ಕಾಮಗಾರಿಗಳ ವಿವರಗಳು.

ಸಾಲು	ಯೋಜನೆ ವಿವರ	ಕ್ರ.ಸ.	ಕೆಲಸದ ಹೆಸರು
1	2	3	
1998-99	ಯೋಜನೆ	1.	ಸಕ್ಕರೆಗೊಲ್ಲಹಳ್ಳಿಯಿಂದ ತಣ್ಣೀರನಹಳ್ಳಿ ರಸ್ತೆ ಅಭಿವೃದ್ಧಿ.
		2.	ಏಕಾತಿಪುರೆದಿಂದ ಬೈರಸಂದ್ರ ರಸ್ತೆ ಅಭಿವೃದ್ಧಿ.
		3.	ಯಲ್ಲಾದಹಳ್ಳಿಯಿಂದ ಊದಿಚಿಕ್ಕನಹಳ್ಳಿ ರಸ್ತೆ ಅಭಿವೃದ್ಧಿ
		4.	ಹೊಸಳ್ಳಿ ಮಾವತ್ತೂರು ರಸ್ತೆ ಲಿಂಗವೀರನಹಳ್ಳಿ ಸಮೀಪ ಮೋರಿ ಕೆಲಸ.
		5.	ದರ್ಗಾಜೋಗಿಹಳ್ಳಿ ಮುಖ್ಯರಸ್ತೆಯಲ್ಲಿ ಮೋರಿಗಳ ನಿರ್ಮಾಣ.
		6.	ಮಧುರನ ಹೊಸಳ್ಳಿ ಗ್ರಾಮ ಪರಿಮಿತಿಯಲ್ಲಿ ಡಾಂಬರು.
		7.	ದೊಡ್ಡಬಳ್ಳಾಪುರ ಹಾಲಿನ ಶೀತಲ ಕೇಂದ್ರದಿಂ ಪಾಲನಜೋಗಿಹಳ್ಳಿ ರಸ್ತೆ ಜಲ್ಲಿ ಕೆಲಸ.
		8.	ಹಾದ್ರಿಪುರ ನರಸಯ್ಯನ ಅಗ್ರಹಾರ ರಸ್ತೆ ಅಭಿವೃದ್ಧಿ.
		9.	ಮಧುರೆ ರಾಜಾನುಕುಂಟೆ ರಸ್ತೆಯಿಂದ ಜೋನ್ನಸಂದ್ರ ಶ್ರೀ ಆಂಜನೇಯ ಸ್ವಾಮಿ ದೇವಾಲಯ ರಸ್ತೆ ಅಭಿವೃದ್ಧಿ.
		10.	ಮಲ್ಲೋಹಳ್ಳಿ ಮುಖ್ಯ ರಸ್ತೆಯಿಂದ ಮುಳ್ಳುಕಟ್ಟಮ್ಮ ದೇವಾಲಯ ರಸ್ತೆ ಕೆಲಸ.

ಅಂದಾಜು ಮೊತ್ತ	ಖರ್ಚಾದ ವೆಚ್ಚ	ಕಾಮಗಾರಿ ಹಂತ
4	5	6 7
1.00	0.99	ಮುಗಿದಿದೆ.
1.00	0.97	- '' -
1.00	0.99	
1.00	0.98	- '' -
1.00	0.93	- '' -
0.70	0.69	- '' -
1.00	0.98	- '' -
1.50	1.47	- '' -
0.50	0.49	- '' -
0.50	0.49	- '' -

11. ಕೆಸ್ತೂರು ಹಣಬೆ ರಸ್ತೆ ಅಭಿವೃದ್ಧಿ.

12. ಗುಣಸಂದ್ರ ರಸ್ತೆ ಅಭಿವೃದ್ಧಿ.

13. ದೊಡ್ಡ ಬೆಳವಂಗಲ ಹೊಲೇರಹಳ್ಳಿ ರಸ್ತೆ ಜಲ್ಲಿ ಕೆಲಸ

14. ಕೊನಘಟ್ಟದಿಂದ ಡಿ.ಡಿ.ರಸ್ತೆ ಅಭಿವೃದ್ಧಿ.

15. ಬಾಲೇನಹಳ್ಳಿ ರಸ್ತೆ ಗ್ರಾಮ ಪರಿಮಿತಿಯಲ್ಲಿ ಅಭಿವೃದ್ಧಿ.

16. ದೊಡ್ಡಬೆಳವಂಗಲ ಗ್ರಾಮದ ರಸ್ತೆ ಡಾಂಬರು.

17. ಹೆಗ್ಗಡಿಹಳ್ಳಿಯಿಂದ ಸೀಗೇಹಳ್ಳಿ ರಸ್ತೆ ಡಾಂಬರು.

18. ತಿಪ್ಪೂರಿನಿಂದ ಜೀಲೇನಹಳ್ಳಿ ರಸ್ತೆ ಡಾಂಬರು.

19. ಚಿಕ್ಕತುಮಕೂರು ರಸ್ತೆ ಡಾಂಬರು.

20. ಕೆಸ್ತೂರು ಗ್ರಾಮ ಪರಿಮಿತಿ ರಸ್ತೆ ಡಾಂಬರು.

21. ಅಂಬಲಗೆರೆಯಿಂದ ಪುರುಷನಹಳ್ಳಿ ರಸ್ತೆ ಡಾಂಬರು.

22. ರಾಜಘಟ್ಟ ಶ್ರೀ ಆಂಜನೇಯ ಸ್ವಾಮಿ ದೇವಾಲಯ ರಸ್ತೆಯಿಂದ ಸುಣ್ಣಘಟ್ಟಹಳ್ಳಿ ರಸ್ತೆ ಅಭಿವೃದ್ಧಿ.

23. ತಿಪ್ಪೂರಿನಿಂದ ಹಣಬೆ ಖಾನೆ ರಸ್ತೆ ಅಭಿವೃದ್ಧಿ

24. ಮರಳೇಹಳ್ಳಿ ರಸ್ತೆ ಅಭಿವೃದ್ಧಿ.

25. ತೂಬಗೆರೆ ಪ್ರಾ. ಆ. ಕೇಂದ್ರ ರಸ್ತೆಯಲ್ಲಿ ಮೋರಿ ಕೆಲಸ.

ಒಟ್ಟು

0.50	0.48	- '' -
0.50	0.49	- '' -
0.80	0.78	- '' -
0.50	0.45	- '' -
0.30	0.29	- '' -
1.60	1.58	ಮುಗಿದಿದೆ.
1.00	0.98	- '' -
2.00	1.99	- '' -
1.00	0.98	ಮುಗಿದಿದೆ.
1.50	1.49	- '' -
1.50	1.49	- '' -
1.00	0.99	- '' -
0.60	0.58	- '' -
0.60	0.58	- '' -
0.50	0.49	- '' -
22.80	22.62	

1998-99	ಬಯಲು ಪ್ರದೇಶಾಭಿವೃದ್ಧಿ ಯೋಜನೆ.	1)	ಗುಡ್ಡದಹಳ್ಳಿಯಿಂದ ಸುಣ್ಣಘಟ್ಟ ಗ್ರಾಮದ ರಸ್ತೆ ಕಾಮಗಾರಿ

1998-99ನೇ ಸಾಲಿನ ಉದ್ಯೋಗ ಭರವಸೆ ಯೋಜನೆ.

1	2	3	4
98-99	ಉದ್ಯೋಗ ಭರವಸೆ ಯೋಜನೆ	1)	ಕಂಟನಕುಂಟೆ ವಡ್ಡರಹಳ್ಳಿ ಮೇಡಹಳ್ಳಿ ರಸ್ತೆ ಅಭಿವೃದ್ಧಿ
		2)	ಕನ್ನಮಂಗಲ ಗ್ರಾಮಗಳ ರಸ್ತೆ ಅಭಿವೃದ್ಧಿ
		3)	ನೃತ್ಯಗ್ರಾಮದಿಂದ ಕೋಡಿಹಳ್ಳಿಗೆ ಹೋಗುವ ರಸ್ತೆ ಅಭಿವೃದ್ಧಿ
		4)	ಕ ಎಸ್ ರಸ್ತೆಯಿಂದ ಸೀಗೇಹಳ್ಳಿ ರಸ್ತೆ ಅಭಿವೃದ್ಧಿ
		5)	ಬಿ ಕ ರಸ್ತೆಯಿಂದ ಗೊಂದ್ರಗೂಳಿಪುರ ರಸ್ತೆ ಅಭಿವೃದ್ಧಿ
		6)	ಬಿ ಕ ರಸ್ತೆಯಿಂದ ಹೊನ್ನಾರದೇವಪುರ ರಸ್ತೆ ಅಭಿವೃದ್ಧಿ.
		7)	ಹಣಬೆ ಗ್ರಾಮ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ
		8)	ಮರಿಮಾಕನಹಳ್ಳಿ ರಸ್ತೆ ಅಭಿವೃದ್ಧಿ
		9)	ಕೆ ಎಸ್ ರಸ್ತೆಯಿಂದ ರಸ್ತೆ ಅಭಿವೃದ್ಧಿ
			ಒಟ್ಟು
99-2000	ಯೋಜನೆ	1)	ಪಾಲನಜೋಗಿಹಳ್ಳಿ ಗ್ರಾಮ ಪರಿಮಿತಿಯಲ್ಲಿ ಡಾಂಬರು

2.00	1.15	ಭೌತಿಕವಾಗಿ ಮುಗಿದಿದೆ.

5	6	7
1.50	0.80	ಮುಗಿದಿದೆ.
3.55	3.50	''
4.00	3.80	''
1.500	1.45	''
2.15	2.10	''
3.935	3.90	''
4.15	3.96	
1.46	1.40	
3.50	3.40	''
25.745	24.31	
2.80	1.35	ಮರುಜಲ್ಲಿ ಕೆಲಸ ಮುಗಿದು ಡಾಂಬರು ಕೆಲಸ ಆಗಬೇಕಿದೆ.

ಯೋಜನೆ
ಗ್ರಾಮೀಣ ಸಂಪರ್ಕ
ರಸ್ತೆಗಳು

2) ಹಣಬೆ ಹೈಸ್ಕೂಲಿನಿಂದ ಪಾಣಿಗರಹಳ್ಳಿ ಗ್ರಾಮ ರಸ್ತೆ ಅಭಿವೃದ್ಧಿ.

3) ಖಾನ್ ಹೊಸಹಳ್ಳಿಯಿಂದ ದೊಡ್ಡಬಳ್ಳಾಪುರ ರಸ್ತೆ ಜಲ್ಲಿ ಕೆಲಸ.

4) ಆರೂಡಿ ಚಿಕ್ಕಬೆಳವಂಗಲ ರಸ್ತೆಯಿಂದ ಬನವತಿ ರಸ್ತೆ ಡಾಂಬರು

5) ಗೌಡಹಳ್ಳಿಯಿಂದ ಗೆಜ್ಜಿಗದಹಳ್ಳಿ ರಸ್ತೆ ಡಾಂಬರು.

6) ಕೊಟ್ಟಗೆ ಮಾಚೇನಹಳ್ಳಿ ಮಲ್ಲಸಂದ್ರ ಗ್ರಾಮದ ರಸ್ತೆ ಡಾಂಬರು

7) ಗುಂಡಂಗೆರೆ ರಸ್ತೆಯಿಂದ ಕಮಲೂರು ತಿರವಾರ ರಸ್ತೆ ಡಾಂಬರು

8) ಯಲ್ಲಾದಹಳ್ಳಿಯಿಂದ ಊದಿಚಿಕ್ಕನಹಳ್ಳಿ ರಸ್ತೆ ಜಲ್ಲಿ ಕೆಲಸ

9) ಪಾಲ್‌ಪಾಲ್‌ದಿನ್ನೆಯಿಂದ ಹಾಡೋನಹಳ್ಳಿ ಹಿರೇಮುದ್ದೇನಹಳ್ಳಿ ರಸ್ತೆ ಡಾಂಬರೀಕರಣ.

10) ಎನ್.ಜಿ.ಡಿ. ರಸ್ತೆಯಿಂದ ಊದಿಚಿಕ್ಕನಹಳ್ಳಿ ರಸ್ತೆ ಡಾಂಬರು 4.00

11) ಕೆ.ಎಸ್. ರಸ್ತೆಯಿಂದ ಹುಲಿಕುಂಟೆ ಹರಿಜನ ಕಾಲೋನಿ ಮಾರ್ಗವಾಗಿ ಅಂಬಲಗೆರೆ ರಸ್ತೆ ಅಭಿವೃದ್ಧಿ.

12) ಸೀಗೇಹಳ್ಳಿಯಿಂದ ಚಿನ್ನಾಪುರ ಮಾರ್ಗ ಮೇಳಕೋಟೆ ಅಡ್ಡ ರಸ್ತೆ ಅಭಿವೃದ್ಧಿ.

		ಮರುಜಲ್ಲಿ ಕೆಲಸ ಮುಗಿದಿದೆ.
4.00	1.837	ಡಾಂಬರು ಕೆಲಸ ಪ್ರಗತಿಯಲ್ಲಿದೆ.
4.00	4.25	ಮುಗಿದಿದೆ.
4.50	4.12	-'' -
4.00	4.26	- '' -
4.00	1.86	ಭೌತಿಕವಾಗಿ ಮುಗಿದಿದೆ.
4.00	4.26	ಮುಗಿದಿದೆ.
4.00	4.24	- '' -
6.00	6.43	- '' -
4.29	- '' -	
4.00	4.23	- '' -
4.90	4.02	- '' -

		13)	ತಿರಗೊಂಡನಹಳ್ಳಿ ಕ್ರಾಸಿನಿಂದ ಜೆಣಚಿಹಟ್ಟ ಗ್ರಾಮಕ್ಕೆ ಜಲ್ಲಿ ಕೆಲಸ.
99-2000	ಯೋಜನೆ	14)	ಕೆ.ಎಸ್. ರಸ್ತೆಯಿಂದ ಹೋಲೇರಹಳ್ಳಿ ರಸ್ತೆ ಜಲ್ಲಿ ಕೆಲಸ
		15)	ಗೆಜ್ಜಿಗದಹಳ್ಳಿ ಪಾಳ್ಯ ಗೆಜ್ಜಿಗದಹಳ್ಳಿ, ಭೈರಸಂದ್ರ ಪಾಳ್ಯ ಮಾರ್ಗ ಗೌಡಹಳ್ಳಿಗೆ ಜಲ್ಲಿ ರಸ್ತೆ ಕೆಲಸ.
			ಒಟ್ಟು
	ಬಯಲುಸೀಮೆ ಪ್ರ.ಯೋಜನೆ	1)	ಮಲ್ಲನಾಯಕನಹಳ್ಳಿ ರಸ್ತೆ ಅಭಿವೃದ್ಧಿ.
		2)	ಮೆಳೆಕೋಟೆ ಕ್ರಾಸಿನಿಂದ ಮೆಳೆಕೋಟೆ ರಸ್ತೆ ಅಭಿವೃದ್ಧಿ
		3)	ರಾಜಘಟ್ಟದಿಂದ ಕಂಚಿಗನಾಳ ಗ್ರಾಮದ ರಸ್ತೆ ಅಭಿವೃದ್ಧಿ

1999-2000ನೇ ಸಾಲಿನ ಉದ್ಯೋಗ ಭರವಸೆ ಯೋಜನೆ

1	2	3	4
99-2000	ಉ.ಭ.ಯೋ.	1)	ಕೊಡ್ಲಿಹಳ್ಳಿ ರಸ್ತೆ ನಿರ್ಮಿಸುವುದು
		2)	ದೊಡ್ಡ ಹೆಜ್ಜಾಜಿಯಿಂದ ಜನತಾಕಾಲೋನಿ ರಸ್ತೆ ಅಭಿವೃದ್ಧಿ
		3)	ಹೆಚ್.ಎಂ. ರಸ್ತೆಯಿಂದ ಲಕ್ಷ್ಮೀದೇವಿಪುರ ರಸ್ತೆ ಅಭಿವೃದ್ಧಿ
		4)	ಲಕ್ಷ್ಮೀದೇವಿಪುರ ಶಾಲಾ ರಸ್ತೆ ಅಭಿವೃದ್ಧಿ
			ಒಟ್ಟು

5.50	5.91	- " -
4.00	3.99	- " -
4.00	3.77	- " -
62.80	58.517	
0.50	0.12	ಪ್ರಗತಿಯಲ್ಲಿದೆ.
2.00	1.45	ಮುಕ್ತಾಯ ಹಂತದಲ್ಲಿದೆ
1.50	1.49	ಮುಗಿದಿದೆ

5	6	7
1.00	0.99	ಮುಗಿದಿದೆ
1.00	0.60	ಪ್ರಗತಿಯಲ್ಲಿದೆ.
1.90	1.50	ಮುಗಿದಿದೆ.
1.20	1.16	
5.10	3.25	

00-01 ಯೋಜನೆ

1) ಹಾದ್ರಿಪುರ ನರಸಯ್ಯನ ಅಗ್ರಹಾರ ಮಧ್ಯೆ ಹೋರಿ ನಿರ್ಮಾಣ.

2) ಕಮ್ಮಸಂದ್ರ ಗ್ರಾಮ ಪರಿಮಿತಿಯಲ್ಲಿ ಮೋರಿ ನಿರ್ಮಾಣ

3) ಕಮ್ಮಸಂದ್ರ ಗ್ರಾಮ ಪರಿಮಿತಿಯಲ್ಲಿ ಬಾಕ್ಸ್ ಮಾದರಿ ಚರಂಡಿ ನಿರ್ಮಾಣ.

4) ಕೆ.ಕೆ. ರಸ್ತೆಯಿಂದ ಸುತ್ತಹಳ್ಳಿ ರಸ್ತೆ ಅಭಿವೃದ್ಧಿ.

5) ಮಲ್ಲೋಹಳ್ಳಿಯಿಂದ ಮಲ್ಲೋಹಳ್ಳಿ ಪಾಳ್ಯ ರಸ್ತೆ ಕೆಲಸ

6) ಪಾಣಿಗರಹಳ್ಳಿ ಬೊಮ್ಮನಹಳ್ಳಿ ರಸ್ತೆ ಅಭಿವೃದ್ಧಿ.

7) ಗುಂಡಂಗೆರೆ ಬಂಕೇನಹಳ್ಳಿ ರಸ್ತೆ ಅಭಿವೃದ್ಧಿ.

8) ಅಂಬಲಗೆರೆಯಿಂದ ಪುರುಷನಹಳ್ಳಿ ರಸ್ತೆ ಅಭಿವೃದ್ಧಿ.

9) ಗಂಟಗಾನಹಳ್ಳಿ ರಸ್ತೆ ಅಭಿವೃದ್ಧಿ.

10) ಕಂಚಿಗದ ಹಳ್ಳಿಯಿಂದ ಕುರಿತಿಮ್ಮಯ್ಯನ ಪಾಳ್ಯ ರಸ್ತೆ ಅಭಿವೃದ್ಧಿ

11) ಕಮ್ಮಸಂದ್ರ ಗ್ರಾಮ ಪರಿಮಿತಿಯಲ್ಲಿ ಜಲ್ಲಿ ಬಿಚಾವಣೆ ಕೆಲಸ.

12) ತಿರಳುಮಲ್ಲಿಗೆ ಗ್ರಾಮದಲ್ಲಿ ರಸ್ತೆ ಡಾಂಬರೀಕರಣ.

13) ಮೂಗೇನಹಳ್ಳಿ ರಸ್ತೆಯಲ್ಲಿ ಡಾಂಬರೀಕರಣ.

14) ಕಮ್ಮಸಂದ್ರ ಗ್ರಾಮ ಪರಿಮಿತಿ ಡಾಂಬರು ಕೆಲಸ.

15) ನಾದಲಾಪುರದಿಂದ ಹಳೇಕೋಟೆ ರಸ್ತೆ ಅಭಿವೃದ್ಧಿ.

1.17	0.62	ಭೌತಿಕವಾಗಿ ಮುಗಿದಿದೆ.
2.20	0.66	ಪ್ರಗತಿಯಲ್ಲಿದೆ.
2.60	1.30	ಮುಗಿದಿದೆ.
1.00	0.99	- '' -
0.84	0.83	- '' -
1.00	0.65	ಮುಕ್ತಾಯ ಹಂತದಲ್ಲಿದೆ.
1.00	0.25	- '' -
1.00	0.99	ಮುಗಿದಿದೆ.
1.50	1.49	- '' -
1.00	0.99	- '' -
2.76	0.90	ಪ್ರಗತಿಯಲ್ಲಿದೆ.
1.00	0.99	ಮುಗಿದಿದೆ.
2.00	-	ಪ್ರಗತಿಯಲ್ಲಿದೆ.
3.12	-	ಟೆಂಡರ್ ಕರೆಯಲಾಗಿದೆ.
1.00	0.99	ಮುಗಿದಿದೆ.

		16) ಲಕ್ಕಸಂದ್ರ ಗ್ರಾಮದ ದೇವಾಲಯ ರಸ್ತೆ ಅಭಿವೃದ್ಧಿ.
		17) ಸೌತೇನಹಳ್ಳಿ ರಸ್ತೆಯಲ್ಲಿ ಮೋರಿ ನಿರ್ಮಾಣ.
		18) ಸಿಂಪಾಡಿಪುರ ರಸ್ತೆಯಲ್ಲಿ ಮೋರಿ ನಿರ್ಮಾಣ.
		ಒಟ್ಟು
00-01	ಬಯಲುಸೀಮೆ ಪ್ರದೇಶಾಭಿವೃದ್ಧಿ ಯೋಜನೆ.	1) ಲಿಂಗಾಪುರ ಹರಿಜನ ಕಾಲೋನಿ ರಸ್ತೆ ಕೆಲಸ.
		2) ನಾಗಸಂದ್ರದಿಂದ ಆಲಹಳ್ಳಿ ರಸ್ತೆ ಅಭಿವೃದ್ಧಿ.
		3) ಚಿಕ್ಕಗುಂಡಪನಾಯಕನಹಳ್ಳಿ ರಸ್ತೆ ಅಭಿವೃದ್ಧಿ.
		4) ಕಾಡತಿಪ್ಪೂರಿನಿಂದ ತಣ್ಣೀರನಹಳ್ಳಿ, ರಸ್ತೆ ಅಭಿವೃದ್ಧಿ
		5) ಬಂಕೇನಹಳ್ಳಿ ಅಪ್ರೋಚ್ ರಸ್ತೆ ಅಭಿವೃದ್ಧಿ.
		6) ತಣ್ಣೀರನಹಳ್ಳಿಯಿಂದ ಚಿಕ್ಕಮಂಕಾನಾಳ ರಸ್ತೆ ಅಭಿವೃದ್ಧಿ
		7) ಖಾಲಿಪಾಳ್ಯ ಗ್ರಾಮ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ.
		8) ಅರಳುಮಲ್ಲಿಗೆಯಿಂದ ಆಲಹಳ್ಳಿ ರಸ್ತೆ ನಿರ್ಮಾಣ.
		ಒಟ್ಟು
00-01	ಯೋಜನೇತರ	1) ಗುಡಂಸಂದ್ರ ಗಲಿಬಿಲಿಕೋಟೆ ರಸ್ತೆ ಅಭಿವೃದ್ಧಿ
		2) ತಿಪ್ಪೂರಿನಿಂದ ಹಣಬೆಗೆ ರಸ್ತೆ ನಿರ್ಮಾಣ.

1.32	0.39	ಪ್ರಗತಿಯಲ್ಲಿದೆ.
0.75	0.34	- '' -
0.39	0.38	ಮುಗಿದಿದೆ.
25.65	12.76	
0.50	-	ಪ್ರಗತಿಯಲ್ಲಿದೆ.
0.50	-	- '' -
0.50	6.30	- '' -
0.50	-	- '' -
0.50	- - '' -	
0.75	-	- '' -
0.25	-	- '' -
0.50	-	- '' -
4.00	6.30	
0.97	0.95	ಮುಗಿದಿದೆ.
0.50	0.48	- '' -

3) ಹೊನ್ನಾವರ ಪುರುಷನಹಳ್ಳಿ ರಸ್ತೆಯಿಂದ ಪಂಚಾಯ್ತಿ ಕಛೇರಿ ರಸ್ತೆ ಅಭಿವೃದ್ಧಿ.

4) ಚಿಕ್ಕಹೆಜ್ಜಾಜಿ ಮಧುರನಹೊಸಹಳ್ಳಿ ರಸ್ತೆ ಅಭಿವೃದ್ಧಿ.

5) ಮಧುರೆ ಕುಂಬಳಕುಂಟೆ ರಸ್ತೆ ಅಭಿವೃದ್ಧಿ.

6) ಕೊನಘಟ್ಟ ರಸ್ತೆಯಿಂದ ಕೋಡಿಹಳ್ಳಿ ಕೆರೆ ಪಕ್ಕದ ರಸ್ತೆ ಅಭಿವೃದ್ಧಿ

7) ವೈ.ಹೆಚ್. ರಸ್ತೆಯಿಂದ ಗೋಗೋ ಫ್ಯಾಕ್ಟರಿ ರಸ್ತೆ ಅಭಿವೃದ್ಧಿ.

8) ಕಾಡತಿಪ್ಪೂರು ತಣ್ಣೀರನಹಳ್ಳಿ ರಸ್ತೆ ದುರಸ್ತಿ.

9) ಗುಂಡಂಗೆರೆ ರಸ್ತೆಯಿಂದ ಕಮಲೂರು ರಸ್ತೆ ಡಾಂಬರು.

10) ಪಾಲ್‌ಸಾಲ್ ರಿನ್ನೆಯಿಂದ ಹಿರೇಮುದ್ದೇನಹಳ್ಳಿ ರಸ್ತೆ ಡಾಂಬರು.

11) ಮಾದಗೊಂಡನಹಳ್ಳಿ (ಉಳಿಕೆ) ರಸ್ತೆ ಡಾಂಬರು.

12) ಎದ್ದಲಹಳ್ಳಿಯಿಂದ ನಾರಸಿಂಹನಹಳ್ಳಿ ರಸ್ತೆ ಕೆಲಸ.

13) ತೂಬಗೆರೆ ಪ್ರೌಢಶಾಲೆಯಿಂದ ಎದ್ದಲಹಳ್ಳಿ ನಾರಸಿಂಹನಹಳ್ಳಿ ರಸ್ತೆ ಅಭಿವೃದ್ಧಿ.

14) ತೂಬಗೆರೆ ಸ್ಮಶಾನ ರಸ್ತೆ ಅಭಿವೃದ್ಧಿ.

15) ಎದ್ದಲಹಳ್ಳಿ ರಸ್ತೆಗೆ ಡಾಂಬರು ಕೆಲಸ.

16) ಎಸ್.ನಾಗೇನಹಳ್ಳಿ ರಸ್ತೆಗೆ ಮರು ಜಲ್ಲಿ ಮತ್ತು ಡಾಂಬರು

17) ತೂಬಗೆರೆ ಶ್ರೀ ವೆಂಕಟರಮಣಸ್ವಾಮಿ ದೇವಾಲಯ ರಸ್ತೆ ಡಾಂಬರು

0.50	0.49	- '' -
0.50	0.50	- '' -
0.50	0.50	- '' -
1.00	0.17	ಪ್ರಗತಿಯಲ್ಲಿದೆ.
1.50	1.49	ಮುಗಿದಿದೆ.
0.75	0.74	- '' -
0.95	0.95	- '' -
0.90	0.89	- '' -
0.95	0.946	- '' -
0.98	0.176	ಪ್ರಗತಿಯಲ್ಲಿದೆ.
0.98	0.98	ಮುಗಿದಿದೆ.
0.98	0.412	ಪ್ರಗತಿಯಲ್ಲಿದೆ.
0.98	-	- '' -
0.96	-	- '' -
0.98	0.97	ಮುಗಿದಿದೆ.

18) ನರಗನಹಳ್ಳಿಯಿಂದ ತಿಮ್ಮಾಜ್ಜನಹಳ್ಳಿ ರಸ್ತೆ ಡಾಂಬರು.

19) ಚಿಕ್ಕನಹಳ್ಳಿ ಕಾಲೇಪುರ ಭಕ್ತರಹಳ್ಳಿ ರಸ್ತೆ ಜಲ್ಲಿ ಕೆಲಸ.

20) ನೇರಳಘಟ್ಟದಿಂದ ಮಂಡಿಬ್ಯಾಡರಹಳ್ಳಿ ರಸ್ತೆ ಜಲ್ಲಿ ಕೆಲಸ.

21) ಕೆ.ಎನ್. ರಸ್ತೆಯಿಂದ ಶ್ಯಾಪಲಾದೇವಿಪುರ ರಸ್ತೆ ಜಲ್ಲಿ ಕೆಲಸ.

22) ಕಾಡಿನೂರು ಪಾಳ್ಯ ಗ್ರಾಮದ ರಸ್ತೆ ಜಲ್ಲಿ

23) ಪೈ.ಹೆಚ್. ರಸ್ತೆಯಿಂದ ನಮವನಹಳ್ಳಿ ಕಸುವನಳ್ಳಿ ಪೂರ್ಣ ರಸ್ತೆ ಜಲ್ಲಿ ಕೆಲಸ

2000-01ನೇ ಸಾಲಿನ ಉದ್ಯೋಗ ಭರವಸೆ ಯೋಜನೆ.

1	2	3	4
2000-01ನೇ ಸಾಲಿನ ಉದ್ಯೋಗ ಭರವಸೆ ಯೋಜನೆ		1)	ರಾಮೇಶ್ವರ ಕ್ರಾಸ್‌ನಿಂದ ಖಾದ್ರಿಪುರ ರಸ್ತೆ ಅಭಿವೃದ್ಧಿ
		2)	ಕಮ್ಮಸಂದ್ರ ಗ್ರಾಮದಲ್ಲಿ (ಸ್ವಸ್ಥಿ) ರಸ್ತೆಗಳ ಬದಿ ಕಲ್ಲು ಚಪ್ಪಡಿ ಚರಂಡಿ
		3)	ಗದ್ದಂಬಚ್ಚಹಳ್ಳಿ ನಾರಸಿಂಹನಕಳ್ಳಿ ಕೂಡುರಸ್ತೆ ಮರುಜಲ್ಲಿ ಕೆಲಸ
		4)	ಹೊಸಹಳ್ಳಿ ತಾಂಡದಿಂದ ಕಮಲೂರು ವೀರಾಪುರದವರೆಗೆ ರಸ್ತೆ ಅಭಿವೃದ್ಧಿ
		5)	ಚಿಕ್ಕನಪಳ್ಳಿಯಿಂದ ಕಾರಾಪುರ ಮಾರ್ಗ ಭಕ್ತರಹಳ್ಳಿಗೆ ಹೋಗುವ ರಸ್ತೆ ಅಭಿವೃದ್ಧಿ

0.95	0.85	- '' -
	0.93	- '' -
	0.66	- '' -
	0.29	- '' -
0.25	0.25	- '' -
1.50	1.49	- '' -

5	6	7
2.00	1.99	ಮುಗಿದಿದೆ.
1.18	0.97	ಮುಗಿಯುವ ಹಂತ
2.00	1.54	ಮುಕ್ತಾಯ ಹಂತ.
2.00	0.35	ಪ್ರಗತಿಯಲ್ಲಿದೆ.
2.00	1.53	''

6) ದೊಡ್ಡಬೆಳವಂಗಲ ಕನಸವಾಡಿ ರಸ್ತೆಯಿಂದ ಕಾರೇಪುರ ರಸ್ತೆಗೆ ಉಳಿದಿರುವ ಭಾಗಕ್ಕೆ ಜಲ್ಲಿ ಕೆಲಸ.

7) ಓಬದೇನಹಳ್ಳಿಯಿಂದ ಆದಿನಾರಾಯಣ ಹೊಸಹಳ್ಳಿ ರಸ್ತೆ ಅಭಿವೃದ್ಧಿ

8) ಪಂತುದಾನ ಕೊಡಿಗೆಹಳ್ಳಿ ರಸ್ತೆ ಅಭಿವೃದ್ಧಿ.

9) ಸಿಂಗೇನಹಳ್ಳಿ ಕ್ರಾಸ್‌ನಿಂದ ಗರುಡಗಲ್ಲು ರಸ್ತೆ ಅಭಿವೃದ್ಧಿ

10) ಹೊನ್ನಾವರ ಪುರಪನಹಳ್ಳಿ ರಸ್ತೆಯಿಂದ ಹೊನ್ನಾವರ ಗ್ರಾಮದ ರಸ್ತೆ ಅಭಿವೃದ್ಧಿ.

11) ಅರಳುಮಲ್ಲಿಗೆಯಿಂದ ಎಸ್.ಎಂ.ಗೊಲ್ಲಹಳ್ಳಿ ರಸ್ತೆ ಬದಿಯಲ್ಲಿ ಚರಂಡಿ ನಿರ್ಮಿಸುವುದು.

12) ಮಲ್ಲೋಹಳ್ಳಿ ರಸ್ತೆಯಿಂದ ಗಾರುಡಿಗರಪಾಳ್ಯ ರಸ್ತೆ ಅಭಿವೃದ್ಧಿ

13) ಕಾಪತಿಪ್ಪೂರಿನಿಂದ ತಣ್ಣೀರಹಳ್ಳಿಗೆ ರಸ್ತೆ ಅಭಿವೃದ್ಧಿ.

ಒಟ್ಟು

14) ತೂಬಗೆರೆ ಗ್ರಾ.ಪ. ಹಾಡೋನಹಳ್ಳಿ ಮೆಳೆಕೋಟೆ ರಸ್ತೆ ಮರು ಡಾಂಬರು.

15) ಗೂಳ್ಯ ಗ್ರಾಮದ ರಸ್ತೆಯಲ್ಲಿ ಮೋರಿ ನಿರ್ಮಾಣ.

16) ಗೂಳ್ಯ ಹರಿಜನ ಕಾಲೋನಿ ರಸ್ತೆ ಅಭಿವೃದ್ಧಿ.

17) ಗೌಡಹಳ್ಳಿ ಗ್ರಾಮದ ರಸ್ತೆ ಮರು ಜಿಲ್ಲೆ ಮತ್ತು ಡಾಂಬರು

2.00	1.65	ಮುಗಿಯುವ ಹಂತ.
2.00	1.995	ಮುಗಿದಿದೆ.
2.00	1.97	''
2.00	0.30	ಪ್ರಗತಿಯಲ್ಲಿದೆ.
1.00	0.25	ಪ್ರಗತಿಯಲ್ಲಿದೆ.
1.50	0.64	''
1.50	1.10	''
1.75	0.69	''
22.93	14.975	
4.00	4.27	ಮುಗಿದಿದೆ.
0.99	0.98	- '' -
0.50	0.50	- '' -
0.99	0.98	- '' -

18) ದೊಡ್ಡಬಳ್ಳಾಪುರ ''ಡಿ'' ಕ್ರಾಸಿನಿಂದ ನಗರದೊಳಕ್ಕೆ ಹೋಗುವ ರಸ್ತೆ ಡಾಂಬರು.

19) ಅಂತರಹಳ್ಳಿ ಗ್ರಾಮದ ರಸ್ತೆ ಮರು ಜಲ್ಲಿ ಮತ್ತು ಡಾಂಬರು

20) ಜಿಂಕೆಬಚ್ಚಹಳ್ಳಿ ಇಂಡಿಸ್ಟ್ರೀಯಲ್ ಎಸ್ಟೇಟ್‌ವರೆಗೆ ಡಾಂಬರು.

21) ಹಾಲೇನಹಳ್ಳಿ ಗ್ರಾಮದಲ್ಲಿ ಪಿಚ್ಚಿಂಗ್ ಕೆಲಸ.

22) ಭೈರಸಂದ್ರ ಪಾಳ್ಯ ರಸ್ತೆ ಅಭಿವೃದ್ಧಿ.

23) ಭೈರಸಂದ್ರ ಗ್ರಾಮದ ರಸ್ತೆ ಅಭಿವೃದ್ಧಿ.

24) ಗೆಜ್ಜೆಗದಹಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿ.

25) ಕರೀಂಸೊಣ್ಣೇನಹಳ್ಳಿ ರಸ್ತೆ ಅಭಿವೃದ್ಧಿ

26) ಕುಕ್ಕಲಹಳ್ಳಿಯಿಂದ ಮಲ್ಲಸಂದ್ರ ರಸ್ತೆ ದುರಸ್ತಿ

27) ತಿರಗೊಂಡನಹಳ್ಳಿ ಕ್ರಾಸಿನಿಂದ ಕೂಡ್ಡಮಂಕನಾಳ ರಸ್ತೆ ಅಭಿವೃದ್ಧಿ

28) ಆರೂಡಿ ಶಾಲೆಯಿಂದ ಮುಖ್ಯರಸ್ತೆಗೆ ದುರಸ್ತಿ ಕೆಲಸ.

29) ಸಕ್ಕರೆಗೊಲ್ಲಹಳ್ಳಿ ಖಾಲಿಪಾಳ್ಯ ಮುಖ್ಯ ರಸ್ತೆಯಿಂದ ಸಕ್ಕರೆಗೊಲ್ಲಹಳ್ಳಿ ಪ್ರೌಢಶಾಲೆ ರಸ್ತೆ ನಿರ್ಮಾಣ.

30) ನೇರಳಘಟ್ಟ ಗ್ರಾಮದಲ್ಲಿ ಚರಂಡಿ ನಿರ್ಮಾಣ.

31) ಪುಟ್ಟಯ್ಯನ ಅಗ್ರಹಾರ ಕೇಂದ್ರ ಜಾಗದಲ್ಲಿ ಚರಂಡಿ ಕೆಲಸ.

32) ಪುರುಷನಹಳ್ಳಿ ಊರ ಮುಂಭಾಗ ಮೋರಿ ಕೆಲಸ

4.00	4.00	- '' -
2.00	1.00	ಪ್ರಗತಿಯಲ್ಲಿದೆ.
2.00	1.00	- '' -
0.25	0.24	- '' -
0.25	0.24	ಮುಗಿದಿದೆ.
0.25	0.24	ಮುಗಿದಿದೆ.
0.25	0.25	- '' -
0.25	0.24	- '' -
0.75	0.73	- '' -
0.50	-	ಪ್ರಾರಂಭಿಸಬೇಕಿದೆ
0.50	0.49	ಮುಗಿದಿದೆ.
0.25	-	ಪ್ರಾರಂಭಿಸಬೇಕಾಗಿದೆ.
0.50	0.24	ಪ್ರಗತಿಯಲ್ಲಿದೆ.
0.25	0.25	ಮುಗಿದಿದೆ
0.25	0.25	- '' -

33) ರಾಮದೇವನಹಳ್ಳಿ ಗ್ರಾಮದಲ್ಲಿ ಚರಂಡಿ ಕೆಲಸ.

34) ಬನವತಿ ವನಘಟ್ಟ ಮಡಗು ರಸ್ತೆಯಲ್ಲಿ ಮೋರಿಗಳ ಮತ್ತು ರಿಪೇರ್‌ಮೆಂಟ್ ಕೆಲಸ.

35) ಸಾಸಲು ಮುಖ್ಯರಸ್ತೆಯಿಂದ ಬೋಗಿಪಾಳ್ಯ ರಸ್ತೆಯಲ್ಲಿ ಮೋರಿ ನಿರ್ಮಾಣ.

36) ಕಂಚಿಗನಾಳ

0.25	0.24	- '' -
0.75	0.74	- '' -
0.25	-	ಪ್ರಗತಿಯಲ್ಲಿದೆ

ಶ್ರೀ ಪಿ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪಂಚಾಯತ್ ಕಾಮಗಾರಿಗಳಲ್ಲಿ ಎಲ್ಲೆಲ್ಲಿ ಲೋಪದೋಷಗಳಾಗಿವೆ ಎನ್ನುವುದರ ಬಗ್ಗೆ ವಿವರವಾದ ಪತ್ರವನ್ನು ನಾನು ಮಾನ್ಯ ಸಚಿವರಿಗೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಬ್ಬರಿಗೂ ಬರೆದು ನಿರ್ದಿಷ್ಟವಾಗಿ ಎಲ್ಲವನ್ನೂ ಪತ್ರದ ಮುಖೇನ ತಿಳಿಸಿದ್ದೇನೆ, ಅದಕ್ಕೆ ಅವರು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇಲ್ಲಿ ಅಂತಹ ಲೋಪದೋಷವೇನೂ ಆಗಿಲ್ಲವೆಂದು ಹೇಳುತ್ತಾರೆ, ಮಂತ್ರಿಗಳು ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಂ.ವೈ.ಘೋರ್ಪಡೆ: ಅಲ್ಲಿ ಇರೆಗ್ಯುಲಾರಿಟಿಸ್, ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎಂಬ ಅಭಿಪ್ರಾಯ ಮಾನ್ಯ ಸದಸ್ಯರಿಗೆ ಇದೆ, ಆ ವಿಷಯ ನಮ್ಮ ಗಮನಕ್ಕೆ ಬಂದಿಲ್ಲ, ಸಿಇಒ ಮುಖಾಂತರ ಆ ಬಗ್ಗೆ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಪಿ.ಕೃಷ್ಣಪ್ಪ: ಮಾನ್ಯ ಮಂತ್ರಿಗಳಿಗೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಪತ್ರ ಬರೆದಾಗ (ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು) ನನಗೆ ಪತ್ರ ಬರೆಯುತ್ತಾರೆ, ನನಗೆ ಆ ಕಾಗದ ತಲುಪಿದ ಮೇಲೆ 7 ಲಕ್ಷ ರೂಪಾಯಿಗಳ ಪೇಮೆಂಟ್ ಆಗಿದೆ, ಜಿಲ್ಲಾ ಪಂಚಾಯತ್‌ನಲ್ಲಿ ಏನಾಗುತ್ತದೆಂಬುದನ್ನು ಇಲ್ಲಿ ಹೇಳಬಯಸುತ್ತೇನೆ.

ಶ್ರೀ ಸಿ.ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ ಸಿಇಒ-ರವರು ಶಾಸಕರು ಕೊಟ್ಟ ಪತ್ರಗಳನ್ನು ಗಮನಿಸುವುದಿಲ್ಲ, ಯಾವುದೇ ಸರ್ಕಾರಿ ಆದೇಶವನ್ನು ಪಾಲನೆ ಮಾಡುವುದಿಲ್ಲ.

ಶ್ರೀ ಎಂ.ವೈ.ಘೋರ್ಪಡೆ: ಈ ಪ್ರಶ್ನೆ ಬರೀ ಇರೆಗ್ಯುಲಾರಿಟೀಸ್‌ಗೆ ಸಂಬಂಧಿಸಿದ್ದಲ್ಲ. ನಾನು ಈ ಸದನಕ್ಕೆ ತಿಳಿಸುವುದೇನೆಂದರೆ, ಇದು ಯೋಜನೆ, ಯೋಜನೇತರ, ಉದ್ಯೋಗ ಭರವಸೆ ಯೋಜನೆ, ಬಯಲು ಸೀಮೆ ಅಭಿವೃದ್ಧಿ ಯೋಜನೆ- ಈ ಕಾರ್ಯಕ್ರಮಗಳಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ 143 ಕಾಮಾಗಾರಿಗಳನ್ನು 235 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ತೆಗೆದುಕೊಳ್ಳಲಾಗುತ್ತಿದೆ, ಅದರಲ್ಲಿ 100 ಕಾಮಗಾರಿಗಳನ್ನು ಪೂರೈಸಿದ್ದಾರೆ, 43 ಕಾಮಗಾರಿಗಳು ಪ್ರಗತಿಯಲ್ಲಿದೆ, 3 ವರ್ಷಗಳಲ್ಲಿ 195 ಲಕ್ಷ ರೂಪಾಯಿಗಳ ವೆಚ್ಚವಾಗಿದೆ, ಈ ಕಾರ್ಯಕ್ರಮದಡಿಯಲ್ಲಿ ಸಾಕಷ್ಟು ಕೆಲಸಗಳು ತಮ್ಮ ಕ್ಷೇತ್ರದಲ್ಲಾಗುತ್ತಿದೆ, ಏನಾದರೂ ಇರೆಗ್ಯುಲಾರಿಟೀಸ್ ಆಗಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ, ವರದಿ ತರಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಕೃಷ್ಣಪ್ಪ: ಅವರ ಗಮನಕ್ಕೆ ತಂದಿದ್ದೇವೆ.

ಅಧ್ಯಕ್ಷರು: ಮಾನ್ಯ ಸಚಿವರು ನನ್ನ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದಾರೆ,

ಮತ್ತೊಂದು ಸಾರಿ ಬರೆದು ಕಳುಹಿಸಿಕೊಡುವುದು ಒಳ್ಳೆಯದು.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಸ್ತೆ ಅಪಘಾತ ತಡೆ ನಿರ್ವಹಣೆ.

262(3162)

ಶ್ರೀ ಸುಭಾಶ್ ಕಲ್ಲೂರ್(ಹುಮ್ನಾಬಾದ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಡೆಯುವಂತಹ ರಸ್ತೆ ಅಪಘಾತಗಳನ್ನು ತಡೆಯಲು ಸರ್ಕಾರವು ಯಾವ ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡಿದೆ?

ಆ) ರಾಷ್ಟ್ರೀಯ ಹೆದ್ದಾರಿ ನಂ-9ರಲ್ಲಿ ಹುಮ್ನಾಬಾದ್ ಪಟ್ಟಣವು ಇರುವುದರಿಂದ ಈ ಜಾಗದಲ್ಲಿ ಪದೇ ಪದೇ ಅಪಘಾತಗಳು ನಡೆಯುವ ಬಗ್ಗೆ ವರದಿ ಬಂದಿದೆಯೇ?

ಇ) ಈ ಅಪಘಾತಗಳ ನಿವಾರಣೆಗಾಗಿ ಈ ರಸ್ತೆಯಲ್ಲಿ ಟ್ರಾಮಾ ಸೆಂಟರ್ ಹಾಗೂ ರಕ್ತ ನಿಧಿ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೆ? (ಏವರ ನೀಡುವುದು)

ಈ) ಹಾಗಿದ್ದಲ್ಲಿ ಈ ಕೇಂದ್ರಗಳನ್ನು ಎಂದಿನಿಂದ ಪ್ರಾರಂಭ ಮಾಡಲಾಗುವುದು.

ಉ) ಇಂತಹ ಕೇಂದ್ರಗಳನ್ನು ರಾಜ್ಯದಲ್ಲಿ ಈಗಾಗಲೇ ಯಾವ ಯಾವ ಭಾಗಗಳಲ್ಲಿ ಸ್ಥಾಪಿಸಲಾಗಿರುತ್ತದೆ. ಹಾಗೂ ರಾಷ್ಟ್ರೀಯ ಹೆದ್ದಾರಿ 9ರಲ್ಲಿ ಸದರಿ ಕೇಂದ್ರಗಳನ್ನು ಸ್ಥಾಪಿಸದಿರಲು ಕಾರಣವೇನು? ಏವರ ನೀಡುವುದು?

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

ಅ) ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತಗಳನ್ನು ತಡೆಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಚಾಲಕರಿಗೆ ಸ್ಪಷ್ಟವಾಗಿ ರಸ್ತೆ ತಿರುವು, ರಸ್ತೆ ಉಬ್ಬರ (ರಂಬಲ್ ಸ್ಟ್ರಿಪ್ಸ್) ಇತ್ಯಾದಿ ಬಗ್ಗೆ ಎಚ್ಚರಿಕೆ ಸೂಚನೆ ನೀಡುವ ''ಸೂಚನಾ ಫಲಕಗಳನ್ನು'' ಹಾಕಲಾಗಿದೆ.

2. ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಕೆಲವು ಕಡೆ ಪದೇ ಪದೇ ಅಪಘಾತಗಳು ಆಗುತ್ತಿದ್ದು ಇಂತಹ ಜಾಗಗಳಿಗೆ ''ಕಪ್ಪು ಚುಕ್ಕೆ'' ಪ್ರದೇಶಗಳೆಂದು